# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಮೈ.4378/2015

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು,ದಿನಾಂಕ: 20.4.2018.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

ವಿಷಯ: ಮಂಡ್ಯ ಜಿಲ್ಲೆ ಕೆ.ಆರ್. ಪೇಟೆ ತಾಲ್ಲೂಕು, ಮಾದಾಪುರ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ 2010-11ನೇ ಸಾಲಿನ ವಸತಿ ಆಶ್ರಯ ಮನೆ ಯೋಜನೆಯಡಿಯಲ್ಲಿ ಗ್ರಾಮ ಸಭೆಯು ಆಯ್ಕೆ ಮಾಡಿ, ವಸತಿ ನಿಗಮ ಅನುಮೋದಿಸಿದ, ಅರ್ಹ ಫಲಾನುಭವಿಗಳ ಮೂಲ ಪಟ್ಟಿಯನ್ನು ತಿದ್ದುಪಡಿ ಮಾಡಿದ್ದಕ್ಕೆ ಅನರ್ಹ ಫಲಾನುಭವಿಗಳ ಹೆಸರನ್ನು ಪಟ್ಟಿಯಿಂದ ತೆಗೆದು ಅವರಿಗೆ ಪಾವತಿಸಿದ ಹಣವನ್ನು ಹಿಂಪಡೆಯಲು ಸಂಬಂಧಪಟ್ಟವರಿಗೆ ನಿರ್ದೇಶನ ನೀಡುವ ಬಗ್ಗೆ.

*******

ಶ್ರೀ. ಎಂ.ಸಿ. ಸೋಮಶೇಖರ ಗೌಡ, ಮಾದಾಪುರ ಗ್ರಾಮ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಶ್ರೀ. ಭಗವಾನ್, ಅಂದಿನ ಪಿಡಿಒ, ಮಾದಾಪುರ ಗ್ರಾಮ. ಪಂಚಾಯತಿ, ಕೆ.ಆರ್. ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ, ಪ್ರಸ್ತುತ ಹುದ್ದೆ - ಅನ್ಯಕ್ರಾಂತ ವಿಭಾಗ, ಜಿಲ್ಲಾಧಿಕಾರಿಗಳ ಕಚೇರಿ, ಮಂಡ್ಯ, (ಇನ್ನು ಮುಂದೆ "ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತಮ್ಮ ದೂರಿನಲ್ಲಿ, ಮಂಡ್ಯ ಜಿಲ್ಲೆ ಮಾದಾಪುರ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ 2010-11ನೇ ಸಾಲಿನ ವಸತಿ ಆಶ್ರಯ ಮನೆ ಯೋಜನೆಯಡಿಯಲ್ಲಿ ಅರ್ಹ ಫಲಾನುಭವಿಗಳನ್ನು ಗ್ರಾಮ ಸಭೆಯು ಆಯ್ಕೆ ಮಾಡಿರುತ್ತದೆಂದು, ತದನಂತರ ಸದರಿ ಆಯ್ಕೆ ಪಟ್ಟಿಯನ್ನು ವಸತಿ ನಿಗಮ ಅನುಮೋದಿಸಿ, ಅರ್ಹ ಫಲಾನುಭವಿಗಳ ಹೆಸರಿಗೆ ಬ್ಯಾಂಕ್

ಉಳಿತಾಯ ಖಾತೆ ಸಂಖ್ಯೆ ಮತ್ತು ಬೆನಿಫಿಷರಿ ಕೋಡ್ ಸಂಖ್ಯೆ ನಿಗಧಿಪಡಿಸಿ ಮುಂದಿನ ಕ್ರಮಕ್ಕೆ ಗ್ರಾಮ ಪಂಚಾಯತಿಗೆ ಕಳುಹಿಸಿಕೊಟ್ಟಿರುತ್ತಾರೆಂದು, ಸದರಿ ಮೂಲ ಆಯ್ಕೆ ಪಟ್ಟಿಯನ್ನು ಎದುರುದಾರರು ಕಾನೂನು ಬಾಹಿರವಾಗಿ ತಿದ್ದುಪಡಿ ಮಾಡಿ ವಸತಿ ನಿಗಮದ ಗಮನಕ್ಕೆ ತರದೆ, ಯಾವುದೇ ಅನುಮತಿಯನ್ನು ಸಹಾ ಪಡೆಯದೆ ಮೂಲ ಫಲಾನುಭವಿಗಳ ಪಟ್ಟಿಯಲ್ಲಿನ ಸುಮಾರು 25 ಜನರ ಹೆಸರುಗಳನ್ನು ತಿದ್ದುಪಡಿ ಮಾಡಿ ಹಣ ಬಿಡುಗಡೆ ಮಾಡಿರುತ್ತಾರೆಂದು ಆಪಾದಿಸಿರುತ್ತಾರೆ.

ದೂರಿನ ಜೊತೆಗೆ ಮೂಲ ಆಯ್ಕೆ ಪಟ್ಟಿಯ ಪ್ರತಿ, ನಿಗಮ ಅನುಮತಿ ನೀಡಿರುವ ಪಟ್ಟಿಯ ಪ್ರತಿ, ಫಲಾನುಭವಿಗಳಿಗೆ ನಿಗಮವು ನೀಡಿರುವ ಬ್ಯಾಂಕ್ ಉಳಿತಾಯ ಖಾತೆ ಮತ್ತು ಬೆನಿಫಿಷರಿ ಕೋಡ್ ಪಟ್ಟಿಯ ಪ್ರತಿ, ತಿದ್ದುಪಡಿ ಮಾಡಿರುವ 25 ಜನರ ಪಟ್ಟಿಯ ಪ್ರತಿ ಮತ್ತು ನಿಗಮವು ಯಾವುದೇ ತಿದ್ದುಪಡಿಗೆ ಅನುಮತಿ ನೀಡಿಲ್ಲವೆಂದು ನೀಡಿರುವ ಹಿಂಬರಹದ ಪ್ರತಿಯನ್ನು ಸಲ್ಲಿಸಿದ್ದಾರೆ.

3. ಪ್ರಕರಣ ದಾಖಲಾದ ನಂತರ, ಜಿಲ್ಲಾಧಿಕಾರಿಗಳು, ಮಂಡ್ಯ, ಇವರಿಗೆ ಪ್ರಕರಣದ ಬಗ್ಗೆ ಕೂಲಂಕುಷ ತನಿಖೆ ಮಾಡಿ ವರದಿ ಸಲ್ಲಿಸಲು ಸೂಚಿಸಲಾಯಿತು. ಅದರಂತೆ ದಿ.17.3.2017ರಂದು ಮಂಡ್ಯ ಜಿಲ್ಲಾಧಿಕಾರಿಗಳು ತಮ್ಮ ವರದಿಯನ್ನು ಸಲ್ಲಿಸಿರುತ್ತಾರೆ. ವರದಿಯಲ್ಲಿ ಈ ಸಂಸ್ಥೆಯಿಂದ ದಾಖಲೆಗಳು ಮತ್ತು ಸೂಚಿತ ಪತ್ರ ಬಂದ ನಂತರ ಪಾಂಡವಪುರ ಉಪವಿಭಾಗಾಧಿಕಾರಿಗಳಿಗೆ ದೂರಿನಲ್ಲಿ ಮಾಡಿದ ಆಪಾದನೆಯ ಬಗ್ಗೆ ತನಿಖೆ ಮಾಡಿ ವರದಿ ಸಲ್ಲಿಸಲು ಸೂಚಿಸಿತ್ತು. ಅದರಂತೆ ಪಾಂಡವಪುರ ಉಪವಿಭಾಗಾಧಿಕಾರಿಗಳು ಎದುರುದಾರರು ಅಧಿಕೃತ ಫಲಾನುಭವಿಗಳ ಹೆಸರು ತಿದ್ದುಪಡಿ ಮಾಡಿ 18 ಫಲಾನುಭವಿಗಳ ಹೆಸರನ್ನು ಅನಧಿಕೃತವಾಗಿ ಸೇರಿಸಿ, ಆ ಪೈಕಿ ಅನುಮೋದನೆಯಾಗದ ಬೇರೆ 6 ಫಲಾನುಭವಿಗಳಿಗೆ ಒಟ್ಟು ರೂ.2,17,500/- ಅನುದಾನ ಬಿಡುಗಡೆಗೆ ಎದುರುದಾರರು ಕಾರಣರಾಗಿರುತ್ತಾರೆಂದು ತಿಳಿಸಿರುತ್ತಾರೆಂದು ಹೇಳಿರುತ್ತಾರೆ. ತಮ್ಮ ವರದಿಯ ಜೊತೆಗೆ ಪಾಂಡವಪುರ ಉಪವಿಭಾಗಾಧಿಕಾರಿಗಳು ಸಲ್ಲಿಸಿದ ವರದಿಯನ್ನು ಹಾಜರುಪಡಿಸಿರುತ್ತಾರೆ.

4. ಎದುರುದಾರರು ಸದರಿ ವರದಿಯ ಮೇಲೆ ತಮ್ಮ ಆಕ್ಷೇಪಣೆಯನ್ನು ದಿ.18.5.2017ರಂದು ಸಲ್ಲಿಸಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿಯ ಕಾರ್ಯವ್ಯಾಪ್ತಿ ಮತ್ತು ಅಧಿಕಾರದ ಬಗ್ಗೆ ತಿಳಿಸಿರುತ್ತಾರೆ. ಮುಂದುವರೆದು ಬಸವ ಇಂದಿರಾ ವಸತಿ ಯೋಜನೆಯಡಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮವು 2010–11ನೇ ಸಾಲಿನಲ್ಲಿ ಗ್ರಾಮ ಪಂಚಾಯತಿ ಪರಿಮಿತಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಿ ಪಟ್ಟಿ ಸಿದ್ಧಪಡಿಸಿ ಕಳುಹಿಸಿಕೊಡಲು ತಾಲ್ಲೂಕು ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಸೂಚಿಸಿದ ಆಧಾರದ ಮೇಲೆ ಮಾದಾಪುರ ಗ್ರಾಮಪಂಚಾಯತಿಯ ಅಂದಿನ ಸದಸ್ಯರುಗಳ ಸಭೆಯಲ್ಲಿ ಫಲಾನುಭವಿಗಳ ಅರ್ಜಿಗಳನ್ನು ಪರಿಶೀಲಿಸಿ ಅಂತಿಮ ಪಟ್ಟಿಯನ್ನು ನಿಗಮಕ್ಕೆ ಕಳುಹಿಸಿರುತ್ತಾರೆ. ಆ ಸಮಯದಲ್ಲಿ ತಾನು ಮಾದಾಪುರ ಗ್ರಾಮ ಪಂಚಾಯತಿಯಲ್ಲಿ ಯಾವುದೇ ಕರ್ತವ್ಯ ನಿರ್ವಹಿಸುತ್ತಿರಲಿಲ್ಲ. ಆದ್ದರಿಂದ ಫಲಾನುಭವಿಗಳ ಆಯ್ಕೆಯಲ್ಲಿ ಅವರ ಯಾವುದೇ ಪಾತ್ರವಿರುವುದಿಲ್ಲ. ಫಲಾನುಭವಿಗಳ ಆಯ್ಕೆ ಸಂದರ್ಭದಲ್ಲಿ ಅರ್ಜಿದಾರರಿಂದ ಮತದಾರರ ಗುರುತಿನ ಚೀಟಿ ವಗೈರೆ ದಾಖಲೆಗಳನ್ನು ಪಡೆದಿರುವುದಿಲ್ಲ. ಅಂತಿಮ ಪಟ್ಟಿಯನ್ನು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮಕ್ಕೆ ತಾಲ್ಲೂಕು ಪಂಚಾಯತಿಯ ಮೂಲಕ ಅಂದಿನ ಗ್ರಾಮ ಪಂಚಾಯತಿ ಅಧಿಕಾರಿಗಳು ಸಲ್ಲಿಸಿರುತ್ತಾರೆ. ಸದರಿ ಪಟ್ಟಿ ಅನುಮೋದನೆಯಾಗಿ ನಿಗಮದವರು ಫಲಾನುಭವಿಗಳ ಹೆಸರಿನಲ್ಲಿ ಎಸ್.ಬಿ.ಎಂ., ಕೆ.ಆರ್.ಪೇಟೆ ಶಾಖೆಯಲ್ಲಿ ಶೂನ್ಯ ಖಾತೆ ತೆರೆದಿರುತ್ತಾರೆ. ನಂತರದಲ್ಲಿ ಸದರಿ ಫಲಾನುಭವಿಗಳ ಮತದಾರರ ಗುರುತಿನ ಚೀಟಿಯನ್ನು ಸಲ್ಲಿಸಲಾಗಿ, ಅವುಗಳಲ್ಲಿ ಹೆಸರು, ತಂದೆಯ ಹೆಸರು, ಮತ್ತು ಗಂಡನ ಹೆಸರು ವ್ಯತ್ಯಾಸ ಕಂಡುಬಂದಿದ್ದು, ಅದರಂತೆ ಸರಿಪಡಿಸಲು ಫಲಾನುಭವಿಗಳು ಅರ್ಜಿಗಳನ್ನು ಸಲ್ಲಿಸಿರುತ್ತಾರೆ. ಈ ವಿಚಾರವಾಗಿ ಗ್ರಾಮ ಪಂಚಾಯತಿಯ ಸಾಮಾನ್ಯ ಸಭೆಯಲ್ಲಿ ಸದಸ್ಯರುಗಳ ಮುಂದೆ ಸೂಕ್ತ ಕ್ರಮಕ್ಕೆ ಮಂಡಿಸಿದಾಗ ಸದಸ್ಯರುಗಳು ಅರ್ಜಿಯಲ್ಲಿ ಕೋರಿಕೊಂಡಂತೆ ತಿದ್ದುಪಡಿ ಮಾಡಲು ಸರ್ವಾನುಮತದಿಂದ ತೀರ್ಮಾನಿಸಿದ ಮೇರೆಗೆ ಮುಂದಿನ ಕ್ರಮಕ್ಕಾಗಿ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗೆ ಅವರು ಪತ್ರ ಬರೆದಿರುವುದಾಗಿ ತಿಳಿಸಿರುತ್ತಾರೆ. ಅದರಂತೆ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಹಣಾಧಿಕಾರಿಗಳು ಕ್ರಮವಹಿಸಿರುವುದಾಗಿ ತಿಳಿಸಿರುತ್ತಾರೆ. ಅವರು ಪಿಡಿಒ

ಆಗಿ ಫಲಾನುಭವಿ ಪಟ್ಟಿಯಲ್ಲಿ ಯಾವುದೇ ಬದಲಾವಣೆ ಮಾಡಿರುವುದಿಲ್ಲ.ಮತ್ತು ಅವರಿಂದ ಯಾವುದೇ ತರಹದ ಕರ್ತವ್ಯಲೋಪವಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ. ಎದುರುದಾರರು ಮುಂದುವರೆದು ಕರ್ನಾಟಕ ಲೋಕಾಯುಕ್ತ ಆಯ್ದೆ ಕಲಂ.8(2)(ಸಿ) ಮತ್ತು (ಡಿ) ಅಡಿಯಲ್ಲಿ ಇರುವ ತತ್ವ ಆಧಾರದ ಮೇಲೆ ದೂರುದಾರರ ದೂರನ್ನು ವಜಾಗೊಳಿಸಬೇಕೆಂದು ಕೋರಿರುತ್ತಾರೆ.

ಆಕ್ಷೇಪಣೆಯ ಜೊತೆಗೆ ತಿದ್ದುಪಡಿ ಮಾಡಲು ನೀಡಿದ ಅರ್ಜಿಗಳ ನಕಲುಗಳನ್ನು, ಸದರಿಯವರ ಮತದಾರರ ಗುರುತಿನ ಚೀಟಿಯ ಪ್ರತಿಗಳನ್ನು ಹಾಗೂ ಮತದಾರರ ಪಟ್ಟಿಯಲ್ಲಿಯ ಹೆಸರುಗಳನ್ನ ಹಾಜರುಪಡಿಸಿರುತ್ತಾರೆ.

5. ದೂರು, ಆಕ್ಷೇಪಣೆ, ಹಾಗೂ ಪಾಂಡವಪುರ ಉಪವಿಭಾಗಾಧಿಕಾರಿಗಳ ವರದಿ ಹಾಗೂ ದಾಖಲೆಗಳನ್ನು ಪರಿಶೀಲಿಸಿದಾಗ, ಪಾಂಡವಪುರ ಉಪವಿಭಾಗಾಧಿಕಾರಿಗಳು ಜಿಲ್ಲಾಧಿಕಾರಿಗಳಿಂದ ಬಂದ ನಿರ್ದೇಶನದ ಮೇರೆಗೆ ತಮ್ಮ ಕಛೇರಿಯ ಪ್ರಕರಣ ಸಂ. ಆಶ್ರಯ. ಸಿ.ಆರ್./02/2015–16 ರಂತೆ ಪ್ರಕರಣ ದಾಖಲಿಸಿಕೊಂಡು ಈ ಕೇಸಿನ ದೂರುದಾರರನ್ನು ಮತ್ತು ಕಾರ್ಯನಿರ್ವಹಣಾಧಿಕಾರಿ, ತಾಲ್ಲೂಕು ಪಂಚಾಯತಿ, ಕೆ.ಆರ್,ಪೇಟೆ, ಎದುರುದಾರರನ್ನು ಹಾಗೂ ಮಾದಾಪುರ ಗ್ರಾಮ ಪಂಚಾಯತಿಯ ಕಾರ್ಯದರ್ಶಿಯವರನ್ನು ಪಾರ್ಟಿಗಳನ್ನಾಗಿ ಮಾಡಿ ಪ್ರಕರಣ ದಾಖಲಿಸಿಕೊಂಡಿರುತ್ತಾರೆ. ಉಭಯಪಕ್ಷಕಾರರಿಗೆ ನೋಟೀಸು ನೀಡಿ ವಿಚಾರಣೆ ಮಾಡಿರುತ್ತಾರೆ. ದಿ.30.1.2016ರಂದು ಕಾರ್ಯನಿರ್ವಹಣಾಧಿಕಾರಿ, ತಾಲ್ಲೂಕುಪಂಚಾಯತಿ, ಕೆ.ಆರ್.ಪೇಟೆ, ಎದುರುದಾರರು, ಪಂಚಾಯತಿ ಕಾರ್ಯದರ್ಶಿಯವರು, ವಿಭಾಗಾಧಿಕಾರಿಯವರ ಮುಂದೆ ಹಾಜರಾಗಿ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ. ಆ ಸಮಯದಲ್ಲಿ ಬಸವ ಇಂದಿರಾ ವಸತಿ ಯೋಜನೆಗೆ ಸಂಬಂಧಿಸಿದಂತೆ ಒಟ್ಟು 175 ಫಲಾನುಭವಿಗಳ ಹೆಸರುಗಳು ನಮೂದಾಗಿರುವ ಪಟ್ಟಿಯನ್ನು ಹಾಜರುಪಡಿಸಿರುತ್ತಾರೆ. ಸದರಿ ಪಟ್ಟಿಯನ್ನು ದಿ.14.10.2010ರಂದು ಮಾದಾಪುರ ಗ್ರಾಮ ಪಂಚಾಯತಿ ಕಛೇರಿಯ ಆವರಣದಲ್ಲಿ ಗ್ರಾಮ ಸಭೆ ನಡೆದು ಅಂದಿನ ಅಧ್ಯಕ್ಷರು ಹಾಗೂ ಗ್ರಾಮ ಪಂಚಾಯತಿ ಅಧಿಕಾರಿಗಳಾದ ರಾಜೇಶ್ ಮತ್ತು ವೆಂಕಟರಂಗಯ್ಯ ಹಾಗೂ ಉಪಾಧ್ಯಕ್ಷರಾದ ಶ್ರೀಮತಿ ಶಶಿಕಲ, ಪಟ್ಟಿಯನ್ನು ತಯಾರಿಸಿರುತ್ತಾರೆ. ದಿ.1.3.2011ರಂದು ಸದರಿ ಪಟ್ಟಿಯನ್ನು ರಾಜೀವ್ ಗಾಂಧಿ

ಗ್ರಾಮೀಣ ವಸತಿ ನಿಗಮದವರು ಅನುಮೋದನೆ ಮಾಡಿರುತ್ತಾರೆ. ಅದನ್ನು ಕಾರ್ಯನಿರ್ವಾಹಕ ಅಧಿಕಾರಿಗಳು ದೃಢೀಕರಿಸಿ ಅನುಮೋದಿಸಿರುತ್ತಾರೆ. ಸದರಿ ಪಟ್ಟಿಯಲ್ಲಿ ಫಲಾನುಭವಿಗಳ ಹೆಸರುಗಳಲ್ಲಿ ದೋಷವಿದ್ದುದರಿಂದ ತಿದ್ದುಪಡಿಗಾಗಿ 25 ಅರ್ಜಿಗಳು ಬಂದಿದ್ದರಿಂದ ದಿ.14.5.2012ರಂದು ಸಾಮಾನ್ಯ ಸಭೆಯಲ್ಲಿ ಮಂಡಿಸಿ ಸಭೆಯ ಅನುಮೋದನೆ ಪಡೆಯಲಾಗಿರುತ್ತದೆಂದು ಎದುರುದಾರರು ವಿಚಾರಣೆ ಸಮಯದಲ್ಲಿ ತಿಳಿಸಿರುತ್ತಾರೆಂದು ಹೇಳಿರುತ್ತಾರೆ. ಉಪವಿಭಾಗಾಧಿಕಾರಿಗಳು ತಮ್ಮ ವರದಿಯಲ್ಲಿ ಮೂಲ ಪಟ್ಟಿಯನ್ನು ಹಾಗೂ ತಿದ್ದುಪಡಿಯಾದ ಪಟ್ಟಿಯನ್ನು ಪರಿಶೀಲಿಸಿದಾಗ 25 ಫಲಾನುಭವಿಗಳ ಹೆಸರುಗಳಲ್ಲಿ ತಿದ್ದುಪಡಿಯಾದದ್ದು ಕಂಡುಬರುತ್ತದೆ ಹಾಗೂ ಸದರಿ ಪಟ್ಟಿಯ ಕ್ರಮ ಸಂಖ್ಯೆ 1 ರಿಂದ 5, 23 ಮತ್ತು 25ರ ಕ್ರಮಸಂಖ್ಯೆ ಹೊರತುಪಡಿಸಿ ಇನ್ನುಳಿದ 18 ಫಲಾನುಭವಿಗಳ ಹೆಸರು, ತಂದೆಯ ಹೆಸರು/ಗಂಡನ ಹೆಸರು/ ಗ್ರಾಮದ ಹೆಸರು/ ಜಾತಿ ತಿದ್ದುಪಡಿ ಮಾಡಿ ಅರ್ಹ ಫಲಾನುಭವಿಗಳ ಗಮನಕ್ಕೆ ತರದೆ ಅಕ್ರಮವಾಗಿ ತಿದ್ದುಪಡಿ ಮಾಡಿರುತ್ತಾರೆಂದು ಕಂಡುಬಂದಿರುತ್ತದೆಂದು ತಿಳಿಸಿರುತ್ತಾರೆ. ಸದರಿ ಅಕ್ರಮ ಕೃತ್ಯವನ್ನು ಎದುರುದಾರರು ಎಸಗಿರುತ್ತಾರೆಂದು ಮೇಲ್ನೋಟಕ್ಕೆ ಸಾಬೀತಾಗಿದೆಯೆಂದು ತಿಳಿಸಿರುತ್ತಾರೆ. ತಮ್ಮ ವರದಿಯ ಜೊತೆಗೆ ತಿದುಪಡಿ ಆದವರ ಹೆಸರುಗಳ ಪಟ್ಟಿಯನ್ನು ಹಾಗೂ ಮೂಲ ಪಟ್ಟಿಯಲ್ಲಿ ತಿಳಿಸಿದ ಸದರಿ 25 ಫಲಾನುಭವಿಗಳು ತಮ್ಮ ಹೆಸರು ಹಾಗೂ ಇತರೆ ಮಾಹಿತಿಗಳನ್ನು ಉದ್ದೇಶಪೂರ್ವಕವಾಗಿ ತಿದ್ದುಪಡಿ ಮಾಡಿ, ತಮಗೆ ಯಾವುದೇ ನೋಟೀಸು ನೀಡಿರುವುದಿಲ್ಲವೆಂದು ಸಲ್ಲಿಸಿದ ಅರ್ಜಿಗಳನ್ನು ಹಾಗೂ ಸದರಿ ಮೂಲ ಫಲಾನುಭವಿಗಳ ಮತದಾರರ ಗುರುತಿನ ಚೀಟಿಯ ಜೆರಾಕ್ಸ್ ಪ್ರತಿ ಮತ್ತು ಮಾದಾಪುರ ಗ್ರಾಮದ ಮತದಾರರ ಪಟ್ಟಿಯನ್ನು ಹಾಜರುಪಡಿಸಿರುತ್ತಾರೆ.

6. ಎದುರುದಾರರು ಹಾಜರುಪಡಿಸಿದ ದಾಖಲೆಗಳಲ್ಲಿ ತಿದ್ದುಪಡಿ ಮಾಡಲು ಸಲ್ಲಿಸಿದ ಅರ್ಜಿದಾರರ ಅರ್ಜಿಗಳ ನಕಲುಗಳು ಇರುತ್ತವೆ. ಅದೇ ರೀತಿ ಪಾಂಡವಪುರ ಉಪವಿಭಾಗಾಧಿಕಾರಿಗಳು ಹಾಜರುಪಡಿಸಿದ ದಾಖಲೆಗಳಲ್ಲಿ ಮೂಲ ಫಲಾನುಭವಿಗಳ ತಮ್ಮ ಹೆಸರುಗಳನ್ನು ತಮಗೆ ನೋಟೀಸು ಕೊಡದೆ ತಿದ್ದುಪಡಿ ಮಾಆಡಿದ ಬಗೆಗೆ ನೀಡಿದ ಅರ್ಜಿಗಳನ್ನು

ಹಾಜರುಪಡಿಸಿರುತ್ತಾರೆ. ಇವುಗಳೆಲ್ಲವನ್ನೂ ಪರಿಶೀಲಿಸಿದಾಗ ನಿಜವಾದ ಮೂಲ ಪಟ್ಟಿಯಲ್ಲಿದ್ದ 25 ಫಲಾನುಭವಿಗಳು ಇದ್ದರೂ ಕೂಡ ಎದುರುದಾರರು ಬೇರೆಯವರಿಂದ ಅರ್ಜಿಗಳನ್ನ ಪಡೆದುಕೊಂಡು ಸದರಿ 25 ಜನ ಫಲಾನುಭವಿಗಳ ಪಟ್ಟಿಯಲ್ಲಿ ಹೆಸರು ಮತ್ತು ಇತರೆ ಮಾಹಿತಿ ತಪ್ಪಾಗಿದೆ, ಅವುಗಳನ್ನು ಸರಿಪಡಿಸಿಕೊಡಿ ಎಂದು ಕೋರಿಕೊಂಡಂತೆ ಬಿಂಬಿಸಿ, ಅದರಂತೆ ದಿ.14.5.2012ರಂದು ಪಂಚಾಯತಿಯ ಸಾಮಾನ್ಯ ಸಭೆಯನ್ನು ಕರೆಯಿಸಿ, ಸಭೆಯಲ್ಲಿ ಸದರಿ ತಿದ್ದುಪಡಿ ಮಾಡಲು ಪಂಚಾಯತಿ ಸದಸ್ಯರುಗಳಿಂದ ತೀರ್ಮಾನ ಮಾಡಿಕೊಂಡಿದ್ದು ಕಂಡುಬರುತ್ತದೆ. ದೂರುದಾರರು ಪಂಚಾತಿಯವರು ದಿ.24.7.2014ರಂದು ನೀಡಿದ ಹಿಂಬರಹವನ್ನು ಹಾಜರುಪಡಿಸಿರುತ್ತಾರೆ. ಸದರಿ ಹಿಂಬರಹದಲ್ಲಿ ದಿನಾಂಕ.14.5.2012ರಂದು ಠರಾವು ಸಂಖ್ಯೆ 5ಸಿ–ರಲ್ಲಿ ಫಲಾನುಭವಿಗಳ ಪಟ್ಟಿಯಲ್ಲಿ ತಿದ್ದುಪಡಿ ಮಾಡಿಕೊಡಲು ನಿರ್ಣಯ ಮಾಡಿ ಅದರಂತೆ ಪಂಚಾಯತಿ ಕಾರ್ಯನಿರ್ವಹಣಾಧಿಕಾರಿಗಳ ಪಟ್ಟಿಯನ್ನು ಸಲ್ಲಿಸಲಾಯಿತು. ಆದರೆ ಸಂಬಂಧಪಟ್ಟ ತಾಲ್ಲೂಕು ಪಂಚಾಯತಿಯಿಂದ ವಾಪಸ್ಸು ಬಂದ ಯಾವುದೇ ಮಾಹಿತಿ ಲಭ್ಯವಿರುವುದಿಲ್ಲವೆಂದು ತಿಳಿಸಿರುತ್ತಾರೆ.

7. ಈ ಎಲ್ಲ ದಾಖಲೆಗಳನ್ನು ಪರಿಶೀಲಿಸಿದಾಗ ಎದುರುದಾರರು ಸದರಿ ಮಾದಾಪುರ ಗ್ರಾಮ ಪಂಚಾಯತಿ ಅಧಿಕಾರಿಯಾಗಿ 25.12.2011ರಿಂದ 21.12.2014ರವರೆಗೆ ಕಾರ್ಯನಿರ್ವಹಿಸುತ್ತಿರುವಾಗ ಅಕ್ರಮವಾಗಿ ಅರ್ಹ ಫಲಾನುಭವಿಗಳ ಹೆಸರುಗಳನ್ನು ತಿದ್ದುಪಡಿ ಮಾಡಿ ಅನರ್ಹ ಫಲಾನುಭವಿಗಳ ಹೆಸರುಗಳನ್ನು ಸೇರಿಸಿ ಅಕ್ರಮವೆಸಗಿರುತ್ತಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ. ಅಷ್ಟೇ ಅಲ್ಲದೆ, ತಾಲ್ಲೂಕು ಪಂಚಾಯತಿ ಕಾರ್ಯನಿರ್ವಹಣಾಧಿಕಾರಿಗಳು ಸಲ್ಲಿಸಿದ 18 ಜನರ ಪಟ್ಟಿಯಲ್ಲಿ ಮಂಜುಳಾ, ಗಂಡ ರಾಮಕೃಷ್ಣೇ ಗೌಡ ಅವರಿಗೆ ರೂ.25,000/–, ಪ್ರಿಯಕುಮಾರಿ, ಗಂಡ ಶೇಖರ್ ಅವರಿಗೆ ರೂ.74,500/–, ಜ್ಯೋತಿ ಗಂಡ ಸೋಮಶೇಖರ್ ಅವರಿಗೆ 54,500/–, ಕಮಲ ಗಂಡ ಅಣ್ಣೇಗೌಡ ಅವರಿಗೆ 14,500/–, ಶಾಂತಮ್ಮಗಂಡ ಸಣ್ಣೇಗೌಡ ಅವರಿಗೆ ರೂ.34,500/– ,ಚಂದ್ರಮ್ಮ ಗಂಡ ನಂಜೇಗೌಡ ವರಿಗೆ 14,500/–ಗಳ ಅನುದಾನ ಬಿಡುಗಡೆಯಾದದ್ದು ಕಂಡುಬರುತ್ತದೆ. ಈ ಮೇಲ್ಕಂಡವರು ಮೂಲ ಫಲಾನುಭವಿಗಳ ಪಟ್ಟಿಯಲ್ಲಿ ಇರುವುದಿಲ್ಲ. ಸದರಿಯವರು 2010ನೇ ಸಾಲಿನಲ್ಲಿ ಫಲಾನುಭವಿಗಳ ಪಟ್ಟಿಯಲ್ಲಿ ಆಯ್ಕೆಯಾಗಿರುವುದಿಲ್ಲ. ಎದುರುದಾರರು ತಮ್ಮ

ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಅನರ್ಹರನ್ನು ಫಲಾನುಭವಿಗಳ ಪಟ್ಟಿಯಲ್ಲಿ ಸೇರಿಸಿ ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

8. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಮಂಡ್ಯ ಜಿಲ್ಲೆ ಕೆ.ಆರ್. ಪೇಟೆ ತಾಲ್ಲೂಕು, ಮಾದಾಪುರ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ 2010–11ನೇ ಸಾಲಿನ ವಸತಿ ಆಶ್ರಯ ಮನೆ ಯೋಜನೆಯಡಿಯಲ್ಲಿ ಗ್ರಾಮ ಸಭೆಯು ಆಯ್ಕೆ ಮಾಡಿ, ವಸತಿ ನಿಗಮ ಅನುಮೋದಿಸಿದ, ಅರ್ಹ ಫಲಾನುಭವಿಗಳ ಮೂಲ ಪಟ್ಟಿಯನ್ನು ತಿದ್ದುಪಡಿ ಮಾಡಿದ್ದಕ್ಕೆ ಅನರ್ಹ ಫಲಾನುಭವಿಗಳ ಹೆಸರನ್ನು ಪಟ್ಟಿಯಿಂದ ತೆಗೆದು ಅವರಿಗೆ ಪಾವತಿಸಿದ ಹಣವನ್ನು ಹಿಂಪಡೆಯಲು ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ **ನಿರ್ದೇಶನ ನೀಡಲು** ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

9. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

20/4/18

(ನ್ಯಾಯಮೂರ್ತಿ ಎನ್.ಆನಂದ)
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ.**

20/4